ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 26-11-1994.

# *ಪರಮಾತ್ಮನ ಪಾಲನೆ ಹಾಗೂ ಪರಿವರ್ತನಾ ಶಕ್ತಿಯ ಪ್ರತ್ಯಕ್ಷ ಸ್ವರೂಪ - ಸಹಜಯೋಗಿ ಜೀವನ*

(परमात्म पालना और परिवर्तन शक्ति का प्रत्यक्ष स्वरूप - सहजयोगी जीवन)

ಇಂದು ಬಾಪ್‌ದಾದಾರವರು ಪ್ರತಿಯೊಂದು ಮಕ್ಕಳ ಮಸ್ತಕದಲ್ಲಿ ವಿಶೇಷವಾಗಿ ಶ್ರೇಷ್ಠ ಭಾಗ್ಯದ ಮೂರು ರೇಖೆಗಳನ್ನು ನೋಡುತ್ತಿದ್ದಾರೆ. ಸರ್ವ ಮಕ್ಕಳ ಭಾಗ್ಯವಂತು ಸದಾ ಸರ್ವ ಶ್ರೇಷ್ಠವಾಗಿಯೇ ಇದೆ ಆದರೆ ಇಂದು ವಿಶೇಷವಾಗಿ ಮೂರು ರೇಖೆಗಳು ಹೊಳೆಯುತ್ತಿದೆ. ಒಂದು- ಪರಮಾತ್ಮನ ಪಾಲನೆಯ ಭಾಗ್ಯದ ರೇಖೆ ಹಾಗೂ ಎರಡು- ಬೇಹದ್ದಿನ ಸರ್ವಶ್ರೇಷ್ಠ ವಿದ್ಯೆಯ ಭಾಗ್ಯದ ರೇಖೆ ಮೂರು- ಶ್ರೇಷ್ಠ ಮತ ಪ್ರಾಪ್ತಿಯಾಗುವ ಭಾಗ್ಯದ ರೇಖೆ. ಲೌಕಿಕದಲ್ಲಾದರೂ ಅಥವಾ ಅಲೌಕಿಕದಲ್ಲಾದರೂ ಪ್ರತಿಯೊಬ್ಬರಿಗೂ ಈ ಜೀವನದಲ್ಲಿ ಅವಶ್ಯವಾಗಿ ಈ ಮೂರೂ ಪ್ರಾಪ್ತಿಗಳು ಪ್ರಾಪ್ತಿಯಾಗುತ್ತವೆ. ಪಾಲನೆಯೂ ಸಿಗುತ್ತದೆ, ವಿದ್ಯೆಯೂ ಸಿಗುವುದು ಹಾಗೂ ಮತವೂ ಸಿಗುವುದು. ಈ ಮೂರರ ಮೂಲಕವೇ ಪ್ರತಿಯೊಂದು ಆತ್ಮನೂ ತನ್ನ ವರ್ತಮಾನ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳಲು ನಿಮಿತ್ತವಾಗುತ್ತದೆ. ಶ್ರೇಷ್ಠ ಆತ್ಮರಾದ ತಮ್ಮೆಲ್ಲರಿಗೆ ಯಾರ ಪಾಲನೆ ಸಿಗುತ್ತಿದೆ? ಪರಮಾತ್ಮ ಪಾಲನೆಯಲ್ಲಿ ಪ್ರತಿಯೊಂದು ಸೆಕೆಂಡ್ ಬೆಳೆಯುತ್ತಿದ್ದೀರಿ. ಪರಮ ಅತ್ಮನು ಸರ್ವ ಶ್ರೇಷ್ಠವಾಗಿದ್ದಾನೆ ಅಂದಮೇಲೆ ಪರಮಾತ್ಮನ ಪಾಲನೆಯೂ ಎಷ್ಟೊಂದು ಶ್ರೇಷ್ಠವಾಗಿರುವುದು! ಹಾಗೆಯೇ ಈ ಪರಮಾತ್ಮನ ಪಾಲನೆಗೆ ವಾತ್ರರಾಗಿರುವವರು ಯಾರಾಗಿದ್ದಾರೆ ಹಾಗೂ ಎಷ್ಟು ಆತ್ಮರು ಪಾತ್ರರಾಗಿದ್ದಾರೆ? ಇಡೀ ವಿಶ್ವದಲ್ಲಿರುವ ಅತ್ಮರು 'ಬಾಬಾ' ಎನ್ನುತ್ತಾರೆ ಆದರೆ ಪಾಲನೆ ಹಾಗೂ ವಿದ್ಯೆಯ ಪಾತ್ರರಾಗುವುದಿಲ್ಲ. ತಾವು ಎಷ್ಟೊಂದು ಸ್ವಲ್ಪ ಅತ್ಮರು ಮಾತ್ರ ಈ ಭಾಗ್ಯದ ಪಾತ್ರರಾಗುತ್ತೀರಿ! ಇಡೀ ಕಲ್ಪದಲ್ಲಿಯೂ ಈ ಸ್ವಲ್ಪ ಸಮಯವಷ್ಟೇ ಪರಮಾತ್ಮನ ಪಾಲನೆಯು ಸಿಗುತ್ತದೆ. ದೇವತೆಗಳ ಪಾಲನೆ, ಮಾನವರ ಪಾಲನೆಯಂತು ಅನೇಕ ಜನ್ಮಗಳಲ್ಲಿ ಸಿಗುತ್ತದೆ ಆದರೆ ಈ ಶ್ರೇಷ್ಠ ಪಾಲನೆಯಂತು ಈಗಿಲ್ಲದಿದ್ದರೆ ಮತ್ತೆಂದಿಗೂ ಇಲ್ಲ. ಇಷ್ಟು ಶ್ರೇಷ್ಠವಾದ ಭಾಗ್ಯದ ರೇಖೆಯು ಸದಾ ಮಸ್ತಕದಲ್ಲಿ ಹೊಳೆಯುತ್ತಿರುವಂತೆ ಅನುಭವ ಮಾಡುವಿರಾ? ಸದಾಕಾಲದ ಯಾವುದೇ ಪ್ರಾಪ್ತಿಯನ್ನು ಮಾಡಿಕೊಳ್ಳಬೇಕೇ ಅಥವಾ ಕೆಲವೊಮ್ಮೆಗೆ ಮಾಡಿಕೊಳ್ಳಲು ಬಯಸುವಿರಾ? ಹಾಗಾದರೆ ಪ್ರಾಪ್ತಿಯ ಪುರುಷಾರ್ಥವೂ ಸದಾಕಾಲದ್ದಾಗಿರಬೇಕೋ ಅಥವಾ ಕೆಲವೊಮ್ಮೆಗೆ ಇರಬೇಕೋ? ಮತ್ತು ಸದಾ ತೀವ್ರವಾಗಿರಬೇಕೇ ಅಥವಾ ಕೆಲವೊಮ್ಮೆ ಸಾಧಾರಣ, ಕೆಲವೊಮ್ಮೆ ತೀವ್ರವಾಗಿರಬೇಕೋ? ಪ್ರತ್ಯಕ್ಷರೂಪದಲ್ಲಿ ಏನಿದೆ? ಬಯಕೆ ಹಾಗೂ ಪ್ರತ್ಯಕ್ಷತೆಯಲ್ಲಿ ಅಂತರವಾಗಿಬಿಡುತ್ತದೆ ಅಲ್ಲವೆ! ಬಹಳಷ್ಟು ಯೋಚಿಸಬಹುದು ಆದರೆ ಸ್ಮೃತಿಯಲ್ಲಿಟ್ಟುಕೊಳ್ಳುವುದು ಕಡಿಮೆ. ಯೋಚನಾ ಸ್ವರೂಪರಾಗಬೇಕಾ ಅಥವಾ ಸ್ಮೃತಿ ಸ್ವರೂಪರು ಆಗಬೇಕಾ? ಸ್ಮೃತಿ ಸ್ವರೂಪರು ಆಗುವವರಲ್ಲವೆ! ಹಾಗಾದರೆ ಈ ಒಂದು

ಮಾತನ್ನಾದರೂ ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ- ಅಮೃತವೇಳೆಯಲ್ಲಿ ತಮ್ಮನ್ನು ಏಳಿಸುವವರು ಯಾರು? ತಂದೆಯ ಪ್ರೀತಿಯು ಎಬ್ಬಿಸುತ್ತದೆ. ದಿನದ ಆರಂಭವೂ ಸಹ ಶ್ರೇಷ್ಠವಾದುದು ಆಗಿದೆ! ಮತ್ತು ತಂದೆಯವರೇ ಸ್ವಯಂ ಭೇಟಿಯಾಗಿವುದಕ್ಕಾಗಿ ಕರೆಯುತ್ತಾರೆ. ಆತ್ಮಿಕ ವಾರ್ತಾಲಾಪ ಮಾಡುತ್ತಾರೆ, ಶಕ್ತಿಗಳನ್ನೂ ತುಂಬುತ್ತಾರೆ! ಅಂದಮೇಲೆ ಪ್ರತೀ ದಿನದ ಆದಿಯು ಎಷ್ಟೊಂದು ಶ್ರೇಷ್ಠವಾಗಿದೆ! ತಂದೆಯ ಪ್ರೀತಿಯಿಂದ ಏಳುತ್ತೀರಾ ಅಥವಾ ಕೆಲವೊಮ್ಮೆ ವಿವಶತೆಯಿಂದ ಏಳುತ್ತೀರಾ? ಯಥಾರ್ಥವಂತು ಪ್ರೀತಿಯ ಹಾಡು ತಮ್ಮನ್ನು ಎಬ್ಬಿಸುತ್ತದೆ. ಅಮೃತವೇಳೆಯಿಂದ ತಂದೆ ಎಷ್ಟು ಸ್ನೇಹಯುಕ್ತವಾಗಿ ಕರೆಯುತ್ತಾರೆ, ಎಬ್ಬಿಸುತ್ತಾರೆ- ಮಧುರ ಮಕ್ಕಳೇ, ಪ್ರಿಯವಾದ ಮಕ್ಕಳೇ, ಬನ್ನಿರಿ ಎಂದು ಹಾಗಾರೆ ಯಾರ ಆದಿಯೇ ಇಷ್ಟು ಶ್ರೇಷ್ಠವಾಗಿರುತ್ತದೆಯೋ ಅವರ ಮಧ್ಯ ಹಾಗೂ ಅಂತ್ಯವೇನಾಗಿರಬಹುದು? ಶ್ರೇಷ್ಠವಾಗಿ ಇರುತ್ತದೆಯಲ್ಲವೆ!

ಬಾಪ್‌ದಾದಾರವರು ನೋಡುತ್ತಿದ್ದರು ವರ್ತಮಾನ ಸಮಯದಲ್ಲಿ ಪಾಲನೆಯ ಭಾಗ್ಯವು ಮಕ್ಕಳಿಗೆ ಎಷ್ಟು ಪ್ರಾಪ್ತಿಯಾಗುತ್ತದೆ! ಎಷ್ಟು ಪ್ರಾಪ್ತಿಯಾಗುತ್ತಿದೆಯೋ ಅಷ್ಟು ಲಾಭವನ್ನು ಪಡೆಯುತ್ತೀರಾ? ಇಷ್ಟು ಭಾಗ್ಯದ ಪಾತ್ರರಾಗುತ್ತೇವೆ! ಎಂದು ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಇರಲಿಲ್ಲ. ಇದಂತೂ ಯೋಚನೆಯಿಂದ ದೂರವಿತ್ತು ಆದರೆ ಎಷ್ಟೊಂದು ಸಹಜವಾಗಿ ಸಿಕ್ಕಿತು! ತಂದೆಯ ಪ್ರೀತಿಯ ಪಾಲನೆಯ ಪ್ರತ್ಯಕ್ಷ ಸ್ವರೂಪವೇ 'ಸಹಜ ಯೋಗಿ ಜೀವನ'ವಾಗಿದೆ. ಯಾರೊಂದಿಗೆ ಪ್ರೀತಿಯಿರುವುದೋ ಅವರಿಗಾಗಿ ಕಷ್ಟದ ಪರಿಸ್ಥಿತಿ ಅಥವಾ ಯಾವುದೇ ಈ ಕಷ್ಟದ ಮಾತುಗಳನ್ನು ನೋಡುವುದಕ್ಕಾಗಲಿ- ಕೇಳುವುದಕ್ಕಾಗಲಿ ಆಗುವುದಿಲ್ಲ. ಆದ್ದರಿಂದ ತಂದೆಯೂ ಸಹ ಕಷ್ಟವನ್ನು ಸಹಜವನ್ನಾಗಿ ಮಾಡಿದ್ದಾರೆ. ಸದಾ ಸಹಜ, ಸದಾ ಪುರುಷಾರ್ಥದ ವೇಗ ತೀವ್ರವಾಗಿ ಇರಬೇಕು. ಇಂದು ಬಹಳ ಒಳ್ಳೆಯ ಪುರುಷಾರ್ಥ ಇದ್ದು ಮತ್ತೆ ಶೇಕಡಾವಾರು ನಾಳೆ ಸ್ವಲ್ಪ ಕಡಿಮೆಯಾದರೆ ಸದಾ ಸಹಜ ಎಂದು ಕರೆಯುತ್ತಾರೆಯೇ? ಸದಾ ಕಷ್ಟದಂತೆ ಯಾರು ತಯಾರು ಮಾಡಿಕೊಂಡರು? ಸ್ವಯಂ ತಾವೇ ತಯಾರು ಮಾಡಿಕೊಂಡಿದ್ದೀರಿ ತಾನೆ? ಕಾರಣವೇನು? ಯೋಚಿಸುವ ಅಭ್ಯಾಸವಂತೂ ಇದೆ ಆದರೆ ಸ್ಮೃತಿ ಸ್ವರೂಪದ ಸಂಸ್ಕಾರ ಒಮ್ಮೊಮ್ಮೆ ಪ್ರತ್ಯಕ್ಷವಾಗುತ್ತದೆ, ಒಮ್ಮೊಮ್ಮೆ ಗುಪ್ತವಾಗಿ ಬಿಡುತ್ತದೆ ಏಕೆಂದರೆ ಸ್ಮೃತಿ ಸ್ವರೂಪದಿಂದ ಸಮರ್ಥ ಸ್ವರೂಪರಾಗುತ್ತೀರಿ. ಯೋಚಿಸುವುದು ಎಂಬುದು ಸಮರ್ಥ ಸ್ವರೂಪವಲ್ಲ, ಸ್ಮೃತಿ ಎಂಬುದು ಸಮರ್ಥವಾದುದು. ವಿಸ್ಮೃತಿಯಲ್ಲೇಕೆ ಬರುತ್ತೀರಿ? ಹವ್ಯಾಸಕ್ಕೆ ವಿವಶರಾಗಿಬಿಡುತ್ತಿದ್ದೀರಿ. ಒಂದುವೇಳೆ ವಿವಶರಾಗದಿದ್ದರೆ ಶಕ್ತಿಶಾಲಿ ಆಗಿಬಿಡುತ್ತೀರಿ, ಎಲ್ಲಿ ಶಕ್ತಿಶಾಲಿ ಆಗಿರುತ್ತಿರೋ ಅಲ್ಲಿ ವಿವಶತೆ ಇಲ್ಲ. ನಿಮ್ಮ ವಾಸ್ತವಿಕ ಹವ್ಯಾಸವು ವಿಸ್ಮೃತಿ ಅಲ್ಲ. ಆದಿಯಲ್ಲಿ ಸ್ಮೃತಿ ಸ್ವರೂಪದ ಪ್ರಾಲಬ್ಧ ಪಡೆಯುವ ದೇವಾತ್ಮರು, ಯೋಗವನ್ನು ಜೋಡಿಸುವ ಪುರುಷಾರ್ಥ ಮಾಡುವುದಿಲ್ಲ ಆದರೆ ಸ್ಮೃತಿ ಸ್ವರೂಪದ ಪ್ರಾಲಬ್ಧವನ್ನು ಪಡೆಯುತ್ತೀರಿ. ಆದಿಯಲ್ಲಿ ಕೂಡ ಸ್ಮೃತಿ ಸ್ವರೂಪದ ಪ್ರತ್ಯಕ್ಷ ಜೀವನವಿದೆ ಮತ್ತು ಅನಾದಿ ಆತ್ಮ ಪರಂಧಾಮದಲ್ಲಿಯೂ ಸ್ಮೃತಿ ಸ್ವರೂಪವಾಗಿರುತ್ತದೆ. ತಾವು ವಿಶೇಷ ಅತ್ಮನ ಸಂಸ್ಕಾರವು ಸ್ವತಹವಾಗಿಯೇ ಸ್ಮೃತಿ ಸ್ವರೂಪವಾಗಿದೆ. ಹಾಗೂ ಅಂತ್ಯದಲ್ಲಿ ಸಂಗಮದಲ್ಲಿಯೂ ಸ್ಮೃತಿ ಸ್ವರೂಪರಾಗುತ್ತೀರಿ! ಅಂದಾಗ ಅನಾದಿ-ಆದಿ- ಹಾಗೂ ಅಂತ್ಯ ಮೂರೂ ಕಾಲಗಳಲ್ಲಿಯೂ ಸ್ಮೃತಿ ಸ್ವರೂಪರಾಗಿದ್ದೀರಿ. ವಿಸ್ಮೃತಿಯಂತೂ ಮಧ್ಯದಲ್ಲಿ ಉಂಟಾಗುತ್ತದೆ ಹಾಗಾದರೆ ಆದಿ-ಅನಾದಿ ಸ್ವರೂಪವು ಸಹಜವಾಗಿ ಇರಬೇಕಾ ಅಥವಾ ಮಧ್ಯದ ಸ್ವರೂಪವೇ? ಹೌದು. ನಾನು ಆತ್ಮನಾಗಿದ್ದೇನೆ ಎಂದು ಯೋಚಿಸುತ್ತೀರಿ ಆದರೆ ಸ್ಮೃತಿ ಸ್ವರೂಪರಾಗಿದ್ದು

ನಡೆಯುವುದು. ಮಾತನಾಡುವುದು, ನೋಡುವುದರಲ್ಲಿ ಅಂತರವುಂಟಾಗುತ್ತದೆ. ಹಾಗಾದರೆ ಇದನ್ನು ನೆನಪಿಟ್ಟುಕೊಳ್ಳಿರಿ- ನಾವು ಪರಮಾತ್ಮ ಪಾಲನೆಯ ಅಧಿಕಾರಿ ಆತ್ಮರಾಗಿದ್ದೇವೆ.

ಬಾಪ್‌ದಾದಾರವರು ದಿನಚರಿಯನ್ನು ಪರಿಶೀಲಿಸುತ್ತಾರೆ. ಅದರಲ್ಲಿ ಕೆಲವೊಮ್ಮೆ ಶ್ರೇಷ್ಠವಾದ, ಕೆಲವೊಮ್ಮೆ ಕನಿಷ್ಠವಾಗಿ, ಕೆಲವೊಮ್ಮೆ ಕೆಲವು ಮಚ್ಚೆಗಳುಂಟಾಗುತ್ತವೆ. ಕೆಲವೊಮ್ಮೆ ಜೀವನದ ಕಾಗದದಲ್ಲಿ ಯಾವುದೇ ಮಚ್ಚೆಗಳಿರದೇ ಇರಬಹುದು ಮತ್ತೆ ಕೆಲವು ಸಮಯದಲ್ಲಿ ಮಚ್ಚೆಗಳೇ ಮಚ್ಚೆಗಳು. ಒಂದರ ಹಿಂದೆ ಇನ್ನೊಂದು. ಇನ್ನೊಂದರ ಹಿಂದೆ ಮತ್ತೊಂದು ಮಚ್ಚೆಗಳೇ ಕಂಡುಬರುತ್ತವೆ. ಹೀಗೇಕೆ? ಒಂದಂತು ತಪ್ಪುಗಳಾಗುತ್ತದೆ ಆದರೆ ತಪ್ಪಾದ ನಂತರದಲ್ಲಿಯೂ ಅದೇ ತಪ್ಪಿನ ಬಗ್ಗೆ ಏಕೆ, ಏನು, ಹೇಗೆ, ಹೀಗಲ್ಲ, ಹಾಗೆ..... ಹೀಗೆ ಹಲವಾರು ರೂಪಗಳಿಂದ ಯೋಚಿಸುತ್ತಾ ಇರುತ್ತೀರಿ, ಮಾತನ್ನು ಬಿಡುವುದೇ ಇಲ್ಲ. ಮಾತುಗಳಂತೂ ತಮ್ಮನ್ನು ಬಿಟ್ಟು ಹೊರಟುಹೋಗುತ್ತದೆ ಆದರೆ ತಾವು ಆ ಮಾತನ್ನು ಬಿಡುವುದೇ ಇಲ್ಲ. ಎಷ್ಟು ಸಮಯ ಯೋಚನಾ ಸ್ವರೂಪರಾಗಿ ಇರುತ್ತೀರಿ, ಯಥಾರ್ಥ ಸ್ಮೃತಿ ಸ್ವರೂಪರಾಗುವುದಿಲ್ಲವೋ ಅಲ್ಲಿಯವರೆಗೆ ಮಚ್ಚೆಗಳ ಮೇಲೆ ಮಚ್ಚೆ(ಕಪ್ಪುಕಲೆ)ಗಳು ಆಗುತ್ತಿರುತ್ತವೆ. ಪರೀಕ್ಷೆಯ ಸಮಯವಂತೂ ಕಡಿಮೆಯಿರುತ್ತದೆ ಆದರೆ ವ್ಯರ್ಥ ವಿಚಾರ ಮಾಡುವ ಸಂಸ್ಕಾರವಿರುವ ಕಾರಣದಿಂದ ಪರೀಕ್ಷೆಯ ಸಮಯವನ್ನೂ ಹೆಚ್ಚು ಮಾಡಿಬಿಡುತ್ತೀರಿ. ಸೆಕೆಂಡ್ ಕಳೆಯಿತು ಮತ್ತು ನಿರ್ವಿಕಲ್ಪ ಸ್ಥಿತಿಯಾಗಿಬಿಡಬೇಕು- ಈ ಸಂಸ್ಕಾರವನ್ನು ಸ್ಮೃತಿಯಲ್ಲಿ ತಂದುಕೊಳ್ಳಿರಿ. ನಿರ್ವಿಕಲ್ಪರಾಗುವುದು ಬರುತ್ತದೆಯೇ? ತಮ್ಮ ಶ್ರೇಷ್ಠ ಭಾಗ್ಯದ ಸ್ಮೃತಿಯನ್ನು ತಂದುಕೊಳ್ಳುತ್ತಾ ಸದಾ ಹರ್ಷಿತವಾಗಿ ಇರಬೇಕು. ತಮಗೆ ಸಿಕ್ಕಿರುವ ಪರಮಾತ್ಮನ ಪಾಲನೆಯನ್ನು ಸದಾ ಪದೇ-ಪದೇ ಸ್ಮೃತಿಯಲ್ಲಿ ತಂದುಕೊಳ್ಳಿರಿ. ಆಲಿಸುವುದೂ ಬರುತ್ತದೆ, ಚಿಂತನೆ ಮಾಡುವುದೂ ಬರುತ್ತದೆ ಆದರೆ ಅಂತರವೇನಾಗುತ್ತದೆ? ಇಡೀ ದಿನದಲ್ಲಿ ಏನೇನು ಆಟವನ್ನಾಡುತ್ತಾರೆ ಎಂದು ಬಾಪ್‌ದಾದಾರವರು ಮಕ್ಕಳ ಆಟವನ್ನು ನೋಡುತ್ತಿರುತ್ತಾರೆ. ಏನೇನು ಆಡುತ್ತೀರೆಂದು ರಾತ್ರಿಯಲ್ಲಿ ಪರಿಶೀಲನೆ ಮಾಡುವಿರಲ್ಲವೇ? ಮಾಯೆಯ ಆಟಿಕೆಯಂತು ಬಹಳ ಆಕರ್ಷಣೆ ಮಾಡುವಂತದ್ದಾಗಿದೆ. ಆ ಆಟಿಕೆಯೊಂದಿಗೆ ಆಡುವುದರಲ್ಲಿ ತೊಡಗಿಬಿಡುತ್ತೀರಿ. ಮೊದಲು ಬಹಳ ಪ್ರೀತಿಯಿಂದ ಮಾಯೆಯು ಆಟವಾಡಿಸುತ್ತದೆ ಮತ್ತು ಆಟವಾಡಿಸುತ್ತಾ-ಆಡಿಸುತ್ತಾ ಯಾವಾಗ ಸೋಲುತ್ತೀರೋ ಆಗ ಜಾಗರೂಕತೆಯಲ್ಲಿ ಬರುತ್ತೀರಿ. ಮೆಜಾರಿಟಿಯಲ್ಲಿ ಇದೊಂದು ಶಕ್ತಿಯ ಕೊರತೆಯು ಉಳಿದುಕೊಳ್ಳುತ್ತದೆ. ಕೆಲವೊಮ್ಮೆ ಬಹಳ ಚೆನ್ನಾಗಿ ನಡೆಯುತ್ತೀರಿ, ಕೆಲವೊಮ್ಮೆ ನಡೆಯುತ್ತೀರಿ, ಕೆಲವೊಮ್ಮೆ ಹಾರುತ್ತೀರಿ. ಮುಂದುವರೆಯುತ್ತೀರಿ ಆದರೆ ಕೆಲವೊಮ್ಮೆ ಕೆಳಗೇಕೆ ಬಂದುಬಿಡುತ್ತೀರಿ? ಇದರ ವಿಶೇಷ ಕಾರಣವೇನು? ಪರಿವರ್ತನಾ ಶಕ್ತಿಯ ಕೊರತೆ. ಇದು ಯಥಾರ್ಥವಲ್ಲ ಎಂದು ಗೊತ್ತಿದ್ದರೂ ಪರಿವರ್ತನೆ ಆಗುವುದರ ಕೊರತೆಯುಂಟಾಗುತ್ತದೆ. ಬ್ರಾಹ್ಮಣ ಜೀವನದಲ್ಲಿ, ಪರಿವರ್ತನೆಯಲ್ಲಿ ಬಂದಿದ್ದೀರಿ. ನಾನು ಬ್ರಾಹ್ಮಣನಲ್ಲ ಎಂದು ಯಾರಾದರೂ ಹೇಳುವಿರಾ? ಎಲ್ಲರೂ ತಮ್ಮನ್ನು ಬಿ.ಕೆ.. ಎಂದು ಬರೆಯುತ್ತೀರಲ್ಲವೆ! ನಾವು ಬ್ರಾಹ್ಮಣರು ಎಂದು ತಿಳಿಯುತ್ತೀರಾ? ಬ್ರಾಹ್ಮಣ ಜೀವನದಲ್ಲಿ ಬರುವ ಪರೀಕ್ಷೆಗಳಲ್ಲಿ ಪರಿವರ್ತನೆ ಮಾಡುವ ಶಕ್ತಿಯ ಅವಶ್ಯಕತೆ ಇರುತ್ತದೆ. ಯಾವಾಗ ವ್ಯರ್ಥ ಸಂಕಲ್ಪಗಳು ನಡೆಯುತ್ತವೆಯೋ ಆಗ ಇದು ವ್ಯರ್ಥವೆಂದು ತಿಳಿದರೂ ಸಹ ಆ ವ್ಯರ್ಥ ಸಂಕಲ್ಪಗಳು ಹರಡುವ ವೇಗವು ತನ್ನ ಕಡೆಗೆ ಸೆಳೆಯುವಷ್ಟಿರುತ್ತದೆ. ಹೇಗೆ ನದಿ ಅಥವಾ ಸಾಗರ ಬಹಳ ವೇಗವಾಗಿ ಹರಿಯುತ್ತದೆ.

ಅದರಿಂದ ತಮ್ಮನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದರೂ ಹರಿಯುತ್ತಾ ಹೋಗುತ್ತೀರಿ. ಇದು ಸರಿಯಲ್ಲ. ಇದರಿಂದ ನಷ್ಟವಿದೆ ಎಂದು ಯೋಚಿಸುತ್ತಿದ್ದರೂ, ತಿಳಿದರೂ ಸಹ ಆ ವೇಗದಲ್ಲಿ ಹರಿದುಹೋಗುತ್ತೀರಿ. ಇದರ ಕಾರಣವೇನು? ಪರಿವರ್ತನಾ ಶಕ್ತಿಯ ಕೊರತೆ. ಮೊದಲ ವಿಶೇಷ ಪರಿವರ್ತನೆ- ಸ್ವರೂಪದ ಪರಿವರ್ತನೆ. ನಾನು ಶರೀರವಲ್ಲ ಆದರೆ ಆತ್ಮನಾಗಿದ್ದೇನೆ ಇದು ಸ್ವರೂಪದ ಪರಿವರ್ತನೆ ಆಗಿದೆ. ಇದು ಆದಿಯ ಪರಿವರ್ತನೆಯಾಗಿದೆ. ಇದರಲ್ಲಿ ಪರಿಶೀಲನೆ ಮಾಡಿರಿ- ಯಾವಾಗ ದೇಹ ಭಾನವು ತೀವ್ರಗತಿಯಲ್ಲಿ ಇರುತ್ತದೆಯೋ ಆಗ ಅತ್ಮ ಅಭಿಮಾನದ ಸ್ವರೂಪದಲ್ಲಿ ಸ್ಥಿತರಾಗಬಲ್ಲಿರಾ ಅಥವಾ ಅದರಲ್ಲಿಯೇ ಹರಿದುಹೋಗುವಿರಾ? ಒಂದುವೇಳೆ ಸೆಕೆಂಡಿನಲ್ಲಿ ಪರಿವರ್ತನಾ ಶಕ್ತಿಯು ಕಾರ್ಯದಲ್ಲಿ ಬಂದರೆ ಸಮಯ-ಸಂಕಲ್ಪವು ಎಷ್ಟೊಂದು ಉಳಿತಾಯವಾಗುವುದು. ವ್ಯರ್ಥದಿಂದ ಸಮರ್ಥತೆಯಲ್ಲಿ ಜಮಾ ಆಗಿಬಿಡುತ್ತದೆ.

ಮೊದಲ ಪರಿವರ್ತನಾ ಶಕ್ತಿ- ಸ್ವರೂಪದ ಪರಿವರ್ತನೆ ಹಾಗೂ ಸ್ವಭಾವದ ಪರಿವರ್ತನೆ ಆಗಿದೆ. ಹಳೆಯ ಸ್ವರೂಪ ಪುರುಷಾರ್ಥಿ ಜೀವನದಲ್ಲಿ ಮೋಸ ಮಾಡುತ್ತದೆ. ಈ ನನ್ನ ಸ್ವಭಾವ ಯಥಾರ್ಥವಲ್ಲ ಎಂಬುದನ್ನು ತಿಳಿಯುತ್ತಿದ್ದರೂ, ಸಮಯಾನುಸಾರ ಮೋಸ ಮಾಡಿಬಿಡುತ್ತದೆ. ಇದನ್ನೂ ತಿಳಿದಿರುತ್ತೀರಿ ಆದರೂ ಸ್ವಭಾವಕ್ಕೆ ವಶರಾಗಿಬಿಡುತ್ತೀರಿ. ಮತ್ತೆ ತಮ್ಮನ್ನು ಉಳಿಸಿಕೊಳ್ಳುವುದಕ್ಕಾಗಿ ಹೇಳುತ್ತೀರಿ- ನನ್ನಲ್ಲಿ ಆ ಭಾವವಿರಲಿಲ್ಲ, ನನ್ನ ಸ್ವಭಾವವೇ ಹೀಗಿದೆ. ನಾನು ಬಯಸುವುದಿಲ್ಲ ಆದರೆ ಅದು ನನ್ನ ಸ್ವಭಾವವಾಗಿದೆ. ಬ್ರಾಹ್ಮಣರಾದ ಕೂಡಲೇ ಜನ್ಮವೇ ಬದಲಾಯಿತು, ಸಂಬಂಧವೂ ಬದಲಾಯಿತು, ತಾಯಿ-ತಂದೆ ಬದಲಾದರು. ಪರಿವಾರ ಬದಲಾಯಿತು ಆದರೆ ಸ್ವಭಾವವು ಬದಲಾಗಲಿಲ್ಲ. ಮತ್ತೆ ರಾಯಲ್ ಶಬ್ದವನ್ನು ಹೇಳುತ್ತೀರಿ- ಇದು ನನ್ನ ಸ್ವಭಾವವಾಗಿದೆ. ಹಾಗಾದರೆ ಮೊದಲ ಬಲಹೀನತೆ ಸ್ವರೂಪದ ಪರಿವರ್ತನೆ, ಎರಡನೆಯದು- ಸ್ವಭಾವದ ಪರಿವರ್ತನೆ. ಮೂರು- ಸಂಕಲ್ಪದ ಪರಿವರ್ತನೆ ಆಗಿದೆ. ಸೆಕೆಂಡಿನಲ್ಲಿ ವ್ಯರ್ಥವನ್ನು ಸಮರ್ಥದಲ್ಲಿ ಪರಿವರ್ತನೆ ಮಾಡಿರಿ. ಕೆಲವರು ಅರ್ಧ ಗಂಟೆ ಅಷ್ಟೇ ಬಿರುಗಾಳಿಯಿತ್ತು ಎಂದು ತಿಳಿಯುತ್ತಾರೆ. ಅರ್ಧ ಗಂಟೆ, 15 ನಿಮಿಷ ನಡೆಯಿತು ಆದರೆ ಅರ್ಧ ಗಂಟೆ ಅಥವಾ15 ನಿಮಿಷವು ಬಲಹೀನ ಸಂಸ್ಕಾರವನ್ನಾಗಿ ಮಾಡಿಬಿಡುತ್ತದೆ ಅಲ್ಲವೇ? ಹೇಗೆ ಶರೀರದಲ್ಲೇನಾದರೂ ಮತ್ತೆ ಮತ್ತೆ ಬಲಹೀನತೆ ಬಂದರೆ, ಸದಾಕಾಲಕ್ಕಾಗಿ ಬಲಹೀನರಾಗಿಬಿಡುತ್ತೀರಿ. ಅಂದಾಗ 15 ನಿಮಿಷವೇನೂ ಕಡಿಮೆಯಲ್ಲ, ಸಂಗಮಯುಗದ ಒಂದೊಂದು ಸೆಕೆಂಡ್ ವರ್ಷಗಳಿಗೆ ಸಮಾನವಾದುದು ಅಂದಮೇಲೆ ಇಷ್ಟು ಹುಡುಗಾಟಿಕೆಯಲ್ಲಿ ಇರಬಾರದು. ಭಲೆ ಸ್ವಲ್ಪವೇ ಸಮಯ ನಡೆದಿರಬಹುದು ಆದರೆ ಕಳೆದುಕೊಂಡದ್ದೆಷ್ಟು? ಯಾವಾಗ ಹೆಜ್ಜೆಯಲ್ಲಿ ಪದಮದಷ್ಟು ಪಡೆಯುತ್ತೇವೆ ಎಂದು ಹೇಳುತ್ತೀರಿ, 15 ನಿಮಿಷಗಳಲ್ಲಿ ಎಷ್ಟೊಂದು ಹೆಜ್ಜೆಗಳನ್ನಿಡುತ್ತೀರಿ ಮತ್ತು ಎಷ್ಟು ಪದಮಗಳನ್ನು ಕಳೆದುಕೊಂಡಿರಿ? ಜಮಾ ಮಾಡುವುದರಲ್ಲಂತು ಬಹಳಚೆನ್ನಾಗಿ ಲೆಕ್ಕವನ್ನಿಡುತ್ತೀರಿ ಆದರೆ ಕಳೆದುಕೊಳ್ಳುವುದರಲ್ಲಿಯೂ ಲೆಕ್ಕವನ್ನಿಡಿ. ಬಯಸದಿದ್ದರೂ ಸಂಸ್ಕಾರವೆಂಬುದು ಸೆಳೆಯುತ್ತಿರುತ್ತದೆ. ಯಾವುದೇ ವಿಷಯ ಮತ್ತೆ-ಮತ್ತೆ ನಡೆದರೆ ಸಂಸ್ಕಾರದ ರೂಪವಾಗಿಬಿಡುತ್ತದೆ. ಆದ್ದರಿಂದ ಸಂಕಲ್ಪವನ್ನು ಪರಿವರ್ತನೆ ಮಾಡಿಕೊಳ್ಳಿರಿ. ಕೇವಲ ಯೋಚಿಸುವುದಲ್ಲ- ಮಾಡಬಾರದು. ಆಗಿಬಿಟ್ಟಿತು, ಏನು ಮಾಡಲಿ? ಹೀಗಲ್ಲ. ಯೋಚಿಸಿರಿ ಮತ್ತು ಮಾಡಿತೋರಿಸಿದಿರಿ. ಕಳೆದುಹೋದ ಮಾತುಗಳಿಗೆ ಬಿಂದುವನ್ನಿಡಿ ಎಂದು ಒಬ್ಬರಿನ್ನೊಬ್ಬರಿಗೆ ಜ್ಞಾನವನ್ನು ಕೊಡುತ್ತಾ ಹೇಳುತ್ತೀರಲ್ಲವೆ. ಯಾರೇ ಬಂದು ಮಾತನಾಡುವರೆಂದರೆ ಬಿಂದುವನ್ನಿಡಿ ಎಂದು ಹೇಳುತ್ತೀರಿ ಆದರೆ ಸ್ವಯಂ ತಾವು ಬಿಂದುವನ್ನು ಇಡುತ್ತೀರಾ?

ಬಿಂದುವನ್ನು ಇಡುವುದಕ್ಕಾಗಿ ಯಾವ ಶಕ್ತಿ ಇರಬೇಕು? ಪರಿವರ್ತನಾ ಶಕ್ತಿ. ಪರಿವರ್ತನಾ ಶಕ್ತಿಯಿರುವವರು ಸದಾ ನಿರ್ಮಲ ಹಾಗೂ ನಿರಹಂಕಾರಿ ಆಗಿರುತ್ತಾರೆ. ಹೇಗೆ ಮುಂಚೆಯೂ ಸಹ ಬಾಪ್‌ದಾದಾರವರು ತಿಳಿಸಿದ್ದಾರೆ- ಬಾಗುವವರೇ ಅಪ್ಪಟ ಬಂಗಾರ ಆಗಿದ್ದಾರೆ. ಅಪ್ಪಟ ಚಿನ್ನದ ಚಿಹ್ನೆಯೇ ಮೋಲ್ಡ್(ಬಾಗುವುದು) ಆಗಿಬಿಡುವುದು. ಹಾಗಾದರೆ ಪರಿವರ್ತನಾ ಶಕ್ತಿಯು ಸಮಯಾನುಸಾರ ಕಾರ್ಯದಲ್ಲಿ ಬರುತ್ತದೆಯೇ ಅಥವಾ ಸಮಯ ಕಳೆದಹೋದ ನಂತರ ಚಿಂತನೆ ಮಾಡುತ್ತಾ ಇರುತ್ತೀರಾ? ಇದನ್ನು ಪರಿಶೀಲನೆ ಮಾಡಿಕೊಳ್ಳಿರಿ. ಅಂದಮೇಲೆ ಪರಿವರ್ತನಾ ಶಕ್ತಿಯನ್ನು ಹೆಚ್ಚಿಸಬೇಕಾಗಿದೆ. ಯಾರಲ್ಲಿ ಪರಿವರ್ತನಾ ಶಕ್ತಿಯಿದೆಯೋ ಅವರು ಎಲ್ಲರ ಪ್ರಿಯರಾಗುವರು. ವಿಚಾರಗಳಲ್ಲಿಯೂ ಸಹಜವಾಗಿರುತ್ತೀರಾ. ವೃದ್ಧಿಯಾಗುತ್ತಾ ಸೇವೆಯಲ್ಲಿ ಇರುತ್ತೀರಲ್ಲವೇ? ಸೇವೆಯಲ್ಲಿ ವಿಘ್ನರೂಪವೇನಾಗುವುದು? ನನ್ನ ವಿಚಾರ, ನನ್ನ ಯೋಜನೆ. ನನ್ನ ಸೇವೆ ಇಷ್ಟು ಚೆನ್ನಾಗಿದ್ದರೂ ನನ್ನನ್ನೇಕೆ ಒಪ್ಪುತ್ತಿಲ್ಲ? ಇಂತಹವರಿಗೆ ಅಪ್ಪಟ ಚಿನ್ನವೆಂದು ಹೇಳುವುದೇ? ನನ್ನತನ ಬಂದುಬಿಟ್ಟಿತು. ನನ್ನದೆಂದು ಬರುವುದು ಅರ್ಥಾತ್ ಅಲಾಯ್(ಬೇರೆ ಲೋಹ) ಮಿಕ್ಸ್ ಆಗುವುದು. ಯಾವಾಗ ಅಪ್ಪಟ ಚಿನ್ನದಲ್ಲಿ ಅಲಾಯ್ ಸೇರ್ಪಡೆಯಾಗುವುದೋ ಆಗ ಅದು ಸತ್ಯವಾಗಿರುತ್ತದೆಯೇ? ಅದರ ಬೆಲೆಯಿರುತ್ತದೆಯೇ? ಎಷ್ಟೊಂದು ಅಂತರವಾಗಿಬಿಡುತ್ತದೆ! ಅಂದಮೇಲೆ ಸಮಯ ಹಾಗೂ ವಾಯುಮಂಡಲವನ್ನು ಗುರುತಿಸುತ್ತಾ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳುವ ಅವಶ್ಯಕತೆಯಿದೆ. ಚಿಕ್ಕ-ಚಿಕ್ಕ ಮಾತುಗಳಲ್ಲಿ ಪರಿವರ್ತನೆ ಮಾಡಿಕೊಳ್ಳುವುದಂತು ಸಹಜ ಆದರೆ ಪ್ರತಿಯೊಂದು ಪರಿಸ್ಥಿತಿಯಲ್ಲಿಯೂ, ಪ್ರತಿಯೊಂದು ಸಂಬಂಧ, ಸಂಪರ್ಕದಲ್ಲಿ ಸಮಯ ಹಾಗೂ ವಾಯುಮಂಡಲವನ್ನು ತಿಳಿದು ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಬೇಕು- ಇದೇ ನಂಬರ್‌ವನ್ ಆಗುವುದಾಗಿದೆ. ಇಂತಹವರೂ ಸಹ ತಿಳಿಯಬೇಕಲ್ಲವೆ. ಇವರೂ ಸಹ ಪರಿವರ್ತನೆ ಮಾಡಿಕೊಳ್ಳಲಿ, ಕೇವಲ ನಾನಷ್ಟೇ ಪರಿವರ್ತನೆ ಆಗಬೇಕಾ? ಎಂದು ಯೋಚಿಸಬಾರದು. ಯಾರು ಮಾಡುವರೋ ಅವರೇ ಅರ್ಜುನ. ಇದರಲ್ಲೇನಾದರೂ ತಾವು ತಮ್ಮನ್ನು ಪರಿವರ್ತನೆ ಮಾಡಿಕೊಂಡರೆ, ಈ ಪರಿವರ್ತನೆಯೇ ವಿಜಯಿಯಾಗುವ ಸಂಕೇತವಾಗಿದೆ. ತಿಳಿಯಿತೆ! ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ಎಲ್ಲಾ ಸದಾ ಸ್ಮೃತಿ ಸ್ವರೂಪ ಆತ್ಮರಿಗೆ, ಸದಾ ಸೆಕೆಂಡಿನಲ್ಲಿ ಪರಿವರ್ತನಾ ಶಕ್ತಿಯ ಮೂಲಕ ಸ್ವ-ಪರಿವರ್ತನೆ ಮಾಡಿಕೊಳ್ಳುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಸಹಜ ಯೋಗಿ ಅನುಭವ ಮಾಡುವ ಅನುಭವಿ ಆತ್ಮರಿಗೆ, ಸದಾ ತಂದೆಯ ಸಮೀಪ ಹಾಗೂ ಸಮಾನವಾಗುವ ಉತ್ಸಾಹ ಉಲ್ಲಾಸದಲ್ಲಿರುವಂತಹ ಎಲ್ಲಾ ಆತ್ಮರಿಗೂ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 26-11-1993.

***ಪರಮಾತ್ಮನ ಪಾಲನೆ ಹಾಗೂ ಪರಿವರ್ತನಾ ಶಕ್ತಿಯ ಪ್ರತ್ಯಕ್ಷ ಸ್ವರೂಪ- ಸಹಜ ಯೋಗಿ ಜೀವನ.***

ಸ್ವಯಂನ್ನು ಎಷ್ಟು ನಿಲ್ಲಿಸಬೇಕು ಎಂದು ಪ್ರಯತ್ನಿಸಿದರೂ ವ್ಯರ್ಥಸಂಕಲ್ಪಗಳ ಪ್ರವಾಹದಲ್ಲಿ ಹರಿಯುತ್ತಾ ಹೋಗುತ್ತೀರಿ. ಇದು ಸರಿಯಲ್ಲ ಇದರಿಂದ ನಷ್ಟವಿದೆ ಎಂದು ತಿಳಿದಿದ್ದರೂ ಆ ವೇಗದಲ್ಲಿ ಹರಿದು ಹೋಗುತ್ತಿದ್ದೀರಿ. ಇದರ ಕಾರಣವೇನು

ಪರಿವರ್ತನಾ ಶಕ್ತಿಯ ಕೊರತೆ. ಮೊದಲ ವಿಶೇಷ ಪರಿವರ್ತನೆ ಸ್ವರೂಪದ ಪರಿವರ್ತನೆ- ನಾನು ಶರೀರವಲ್ಲ ಆದರೆ ಆತ್ಮನಾಗಿದ್ದೇನೆ. ಎರಡನೆಯದು- ಸ್ವಭಾವದ ಪರಿವರ್ತನೆ. ನನ್ನ ಸ್ವಭಾವ, ನನ್ನ ಭಾವ ಎಂದು ಹೇಳುವಂತಿಲ್ಲ. ಮೂರನೆಯದು ಸಂಕಲ್ಪದ ಪರಿವರ್ತನೆಯಾಗಿದೆ. ಒಂದು ಸೆಕೆಂಡಿನಲ್ಲಿ ವ್ಯರ್ಥವನ್ನು ಸಮರ್ಥದಲ್ಲಿ ಪರಿವರ್ತನೆ ಮಾಡಿರಿ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪರಮಾತ್ಮನ ಪಾಲನೆ, ಸರ್ವಶ್ರೇಷ್ಠ ವಿದ್ಯೆ, ಶ್ರೇಷ್ಠ ಮತದಿಂದ ವರ್ತಮಾನ ಹಾಗೂ ಭವಿಷ್ಯವನ್ನು ಶ್ರೇಷ್ಠವಾಗಿ ತಯಾರು ಮಾಡಿಕೊಳ್ಳುವ ಭಾಗ್ಯಶಾಲ

2. ನಾನು ಯೋಚನಾ ಸ್ವರೂಪ ಮತ್ತು ಸ್ಮೃತಿ ಸ್ವರೂಪದಲ್ಲಿ ಸಮಾನವಾಗಿದ್ದೇನೆ.

3. ನಾನು ಪರಮಾತ್ಮ ಪಾಲನೆಯ ಪ್ರತ್ಯಕ್ಷ ಸ್ವರೂಪವಾದ "ಸಹಜ ಯೋಗಿ" ಮತ್ತು "ಸಹಜಪುರುಷಾರ್ಥಿ" ಜೀವನವನ್ನು ಅನುಭವ ಮಾಡುತ್ತಿದ್ದೇನೆ.

4. ನಾನು ಸ್ಮೃತಿ ಸ್ವರೂಪವಾಗುವ ಸಂಸ್ಕಾರವನ್ನು ಪ್ರತ್ಯಕ್ಷದಲ್ಲಿ ತಂದಿರುವ ಸಮರ್ಥ ಸ್ವರೂಪ.

5. ನಾನು ಆದಿ, ಅನಾದಿ ಹಾಗೂ ಅಂತ್ಯ ಮೂರು ಕಾಲಗಳಲ್ಲಿಯೂ ಸಹಜ ಸ್ಮೃತಿ ಸ್ವರೂಪವಾಗಿ ಪರಮಾತ್ಮನ ಪಾಲನೆಗೆ ಅಧಿಕಾರಿಯಾಗಿದ್ದೇನೆ.

6. ನಾನು ವ್ಯರ್ಥವನ್ನು ಸಮಾಪ್ತಿ ಮಾಡಿ ಕ್ಷಣದಲ್ಲಿ ನಿರ್ವಿಕಲ್ಪ ಸ್ಥಿತಿಯ ಸಂಸ್ಕಾರವನ್ನು ತಯಾರು ಮಾಡಿಕೊಳ್ಳುವ ಸಹಜ ಸ್ಮೃತಿ ಸ್ವರೂಪ.

7. ನಾನು ನನ್ನ ಶ್ರೇಷ್ಠಭಾಗ್ಯವನ್ನು, ಪರಮಾತ್ಮನ ಪಾಲನೆಯನ್ನು ಪದೇ ಪದೇ ಸ್ಮೃತಿ ಮಾಡಿ ಹರ್ಷಿತವಾಗಿದ್ದೇನೆ.

8. ನಾನು ಬ್ರಾಹ್ಮಣ ಜೀವನದಲ್ಲಿ ನಾನು ಶರೀರವಲ್ಲ ಆದರೆ ಆತ್ಮನಾಗಿದ್ದೇನೆ ಎಂಬ ಸ್ವರೂಪದ ಪರಿವರ್ತನೆ ಯನ್ನು ಮಾಡಿ ಸಮಯ, ಸಂಕಲ್ಪವನ್ನು ಉಳಿತಾಯ ಮಾಡುವ ಸಮರ್ಥ ಸ್ವರೂಪ.

9. ನಾನು ಪುರುಷಾರ್ಥಿ ಜೀವನದಲ್ಲಿ ಹಳೆಯ ಸ್ವಭಾವವನ್ನು ಸಮಾಪ್ತಿ ಮಾಡಿದ್ದೇನೆ.

10. ನಾನು ಸೆಕೆಂಡ್ ನಲ್ಲಿ ವ್ಯರ್ಥ ಸಂಕಲ್ಪಗಳನ್ನು ಸಮರ್ಥದಲ್ಲಿ ಪರಿವರ್ತನೆ ಮಾಡಿರುವ ಸಮರ್ಥ ಸ್ವರೂಪ.

11. ನಾನು ಪರಿವರ್ತನಾಶಕ್ತಿಯಿಂದ ಸ್ವಯಂ ಬಿಂದುವಿಟ್ಟು ನಿರ್ಮಲವಾಗಿ, ನಿರಹಂಕಾರಿಯಾಗಿ ಇದ್ದೇನೆ.

12. ನಾನು ಪರಿವರ್ತನಾ ಶಕ್ತಿಯಿಂದ ಎಲ್ಲರ ಪ್ರಿಯವಾಗಿ, ಯೋಚನೆಯಲ್ಲಿ ಸಹಜವಾಗಿ ಇದ್ದೇನೆ.

13. ನಾನು "ನನ್ನದು" ಎಂಬ ಕಲ್ತಿಯನ್ನು ಸಮಾಪ್ತಿ ಮಾಡಿರುವ ಅಪ್ಪಟ ಚಿನ್ನ.

14. ನಾನು ಪ್ರತಿಯೊಂದು ಪರಿಸ್ಥಿತಿಯಲ್ಲಿ, ಸಂಬಂಧ ಸಂಪರ್ಕದಲ್ಲಿ, ಸಮಯ ಹಾಗೂ ವಾಯುಮಂಡಲವನ್ನು ತಿಳಿದು ಸ್ವಯಂ ಅನ್ನು ಪರಿವರ್ತನೆ ಮಾಡಿಕೊಳ್ಳುವ ನಂಬರ್‌ವನ್ ವಿಜಯೀ ಸ್ವರೂಪ.